## ಪ್ರಾರ್ಥನೆ

# ತ್ರಿವೇಣೀ ದಶಕ ಸ್ತೋತ್ರಮ್ - ೨

**ಮಾಂಗಲ್ಯಸಂಪತ್ತಿಸಮೃದ್ಧವೇಣೀ**
**ಮಾತ್ರಾಂತರನ್ಯಸ್ತನಿದಾನವೇಣೀ ।**
**ಪರಂಪರಾಪಾತಕಹಾರಿವೇಣೀ**
**ಶ್ರೀಮತ್ಪ್ರಯಾಗೇ ಜಯತಿ ತ್ರಿವೇಣೀ ॥ ೬ ॥**

ಮಾಂಗಲ್ಯದ ಸಂಪತ್ತನ್ನು ಸಮೃದ್ಧವಾಗಿಸುವ, ಬೇರೆ ತಾಯಿಯಲ್ಲಿ ಪಾವಿತ್ರ್ಯವನ್ನು ಇರಿಸಿದ, ಜನ್ಮಜನಾಂತರಗಳಲ್ಲಿ ಸಂಚಿತವಾದ ಪಾಪಗಳನ್ನು ದೂರ ಮಾಡುವ ತ್ರಿವೇಣೀ ಸಂಗಮವು ಶ್ರೀ ಪ್ರಯಾಗದಲ್ಲಿ ವಿರಾಜಿಸುತ್ತಿದೆ.

**ನಿಮಜ್ಜದುನ್ಮಜ್ಜಮನುಷ್ಯವೇಣೀ**
**ತ್ರಯೋದಯೋಭಾಗ್ಯವಿವೇಕವೇಣೀ ।**
**ವಿಮುಕ್ತಜನ್ಮಾವಿಭವೈಕವೇಣೀ**
**ಶ್ರೀಮತ್ಪ್ರಯಾಗೇ ಜಯತಿ ತ್ರಿವೇಣೀ ॥ ೭ ॥**

ಸಂಸಾರಸಾಗರದಲ್ಲಿ ಮುಳುಗುತ್ತಿರುವವನನ್ನು ಉದ್ಧರಿಸುವ, ಸದ್ಬುದ್ಧಿ, ಸೌಭಾಗ್ಯ, ವಿವೇಕಗಳನ್ನು ವರ್ಧಿಸುವ, ಜನ್ಮಜನ್ಮಾಂತರಗಳ ಬಂಧನದಿಂದ ಬಿಡಿಸುವ ತ್ರಿವೇಣೀ ಸಂಗಮವು ಶ್ರೀ ಪ್ರಯಾಗದಲ್ಲಿ ವಿರಾಜಿಸುತ್ತಿದೆ.

**ಸೌಂದರ್ಯವೇಣೀ ಸುರಸಾರ್ಥವೇಣೀ**
**ಮಾಧುರ್ಯವೇಣೀ ಮಹನೀಯವೇಣೀ ।**
**ರತ್ನೈಕವೇಣೀ ರಮಣೀಯವೇಣೀ**
**ಶ್ರೀಮತ್ಪ್ರಯಾಗೇ ಜಯತಿ ತ್ರಿವೇಣೀ ॥ ೮ ॥**

ಸೌಂದರ್ಯದಿಂದ ಕೂಡಿರುವ, ದೇವತೆಗಳ ಸಮೂಹವೇ ವಿಹರಿಸುವ, ಮಧುರವೂ ಮಹಿಮಾನ್ವಿತವೂ ಅನರ್ಘ್ಯರತ್ನದಂತೆ ರಮಣೀಯವೂ ಆದ ತ್ರಿವೇಣೀ ಸಂಗಮವು ಶ್ರೀ ಪ್ರಯಾಗದಲ್ಲಿ ವಿರಾಜಿಸುತ್ತಿದೆ.

**ಸಾರಸ್ವತಾಕಾರವಿಧಾನವೇಣೀ**
**ಕಾಲಿಂದಕನ್ಯಾಮಯಲಕ್ಷ್ಯವೇಣೀ ।**
**ಭಾಗೀರಥೀರೂಪಮಹೇಶವೇಣೀ**
**ಶ್ರೀಮತ್ಪ್ರಯಾಗೇ ಜಯತಿ ತ್ರಿವೇಣೀ ॥ ೯ ॥**

ಜ್ಞಾನಸ್ವರೂಪಿಯಾದ ಸರಸ್ವತಿ, ಕಲಿಂದನ ಮಗಳಾದ ಯಮುನೆ ಹಾಗೂ ಮಹೇಶನ ಜಟೆಯಲ್ಲಿರುವ ಭಾಗೀರಥೀ ಈ ಮೂರು ದಿವ್ಯನದಿಗಳು ಒಂದುಗೂಡಿರುವ ತ್ರಿವೇಣೀ ಸಂಗಮವು ಶ್ರೀ ಪ್ರಯಾಗದಲ್ಲಿ ವಿರಾಜಿಸುತ್ತಿದೆ.

**ಶ್ರೀಮದ್ಭವಾನೀಭವನೈಕವೇಣೀ**
**ಲಕ್ಷ್ಮೀಸರಸ್ವತ್ಯಭಿಮಾನವೇಣೀ ।**
**ಮಾತಾ ತ್ರಿವೇಣೀತ್ರಯೀರತ್ನವೇಣೀ**
**ಶ್ರೀಮತ್ಪ್ರಯಾಗೇ ಜಯತಿ ತ್ರಿವೇಣೀ ॥ ೧೦ ॥**

ಭವಾನಿಯ ನಿವಾಸವಾದ, ಲಕ್ಷ್ಮೀಸರಸ್ವತಿಯರ ಅಭಿಮಾನರೂಪವಾದ, ಹಲವು ಸಂಗಮಗಳಲ್ಲಿ ರತ್ನಪ್ರಾಯವಾದ ತ್ರಿವೇಣೀ ಸಂಗಮವು ಶ್ರೀ ಪ್ರಯಾಗದಲ್ಲಿ ವಿರಾಜಿಸುತ್ತಿದೆ.

— ಶ್ರೀ ಶಂಕರಾಚಾರ್ಯ

## ಸೂಕ್ತಿಪ್ರಭ

ನಮ್ಮನ್ನು ನಾವು ಕಂಡುಕೊಳ್ಳುವಂತೆ ಮಾಡುವುದೇ ಕಲೆ. ಅದೇ ವೇಳೆ, ನಮ್ಮನ್ನು ನಾವು ಮರೆಯುವಂತೆ ಮಾಡುವುದೂ ಕಲೆಯೇ. — ಥಾಮಸ್ ಮೆರ್ಟನ್

ನಿಜವಾದ ಅಪಾಯವಿರುವುದು ಕಂಪ್ಯೂಟರ್‌ಗಳು ಮಾನವರಂತೆ ಆಲೋಚಿಸಲು ಆರಂಭಿಸುವುವು ಎಂಬುದರಲ್ಲಲ್ಲ ; ಮಾನವರು ಕಂಪ್ಯೂಟರ್‌ಗಳಂತೆ ಆಲೋಚಿಸಲು ಆರಂಭಿಸುವರು ಎಂಬುದರಲ್ಲಿ. — ಸಿಡ್ನಿ ಜೆ. ಹ್ಯಾರಿಸ್

ನೀನು ದೇವರಿಂದ ಮನುಷ್ಯದೇಹವನ್ನು ಪಡೆದಿರುವೆ. ಇದೇ ದೇವರನ್ನು ಪಡೆಯುವುದಕ್ಕೆ ತಕ್ಕ ಸಮಯ. ಬೇರೆ ಕಾರ್ಯಗಳಿಂದ ಏನೂ ಪ್ರಯೋಜನವಿಲ್ಲ. — ಗುರುನಾನಕ್

ಭರವಸೆಯೆಂಬುದು ಜಾಗೃತಗೊಂಡ ಆತ್ಮದ ಕನಸು. — ಫ್ರೆಂಚ್ ಗಾದೆ

ಹೃದಯಕ್ಕೆ ಶಿಕ್ಷಣ ಕೊಡದೆ, ಮನಸ್ಸಿಗೆ ಕೊಡುವ ಶಿಕ್ಷಣವು ಶಿಕ್ಷಣವೇ ಅಲ್ಲ. — ಅರಿಸ್ಟಾಟಲ್

ನಿನ್ನ ತಪ್ಪುಗಳಿಗೆ ನೀನು ಕೃತಜ್ಞನಾಗಿರು. ಏಕೆಂದರೆ ಅವು ನಿನಗೆ ಅಮೂಲ್ಯ ಪಾಠಗಳನ್ನು ಕಲಿಸಿವೆ. — ಅಜ್ಞಾತ

ನಾವು ಮಹಾನ್ ಕಾರ್ಯಗಳನ್ನು ಮಾಡುವಷ್ಟು ದೊಡ್ಡವರಲ್ಲದೆ ಇರಬಹುದು. ಆದರೆ ಸಣ್ಣ ಕಾರ್ಯಗಳನ್ನು ಮಹತ್ವಪೂರ್ಣವಾಗಿ ಮಾಡಬಹುದು. — ನೆಪೋಲಿಯನ್